ಉದಯವಾಣಿ
ಕನ್ನಡ ದಿನಪತ್ರಿಕೆ



ಎಸ್‌ಬಿಎಂ ತಂಡದ ನಾಯಕ ರೋಹಿತ್ ಗೌಡ ಟ್ರೋಫಿಯನ್ನು ರಘುರಾಮ್ ಭಟ್ ಅವರಿಂದ ಸ್ವೀಕರಿಸುತ್ತಿರುವುದು

# ಎಸ್‌ಬಿಎಂ ಜೈನ್ ಕಾಲೇಜಿಗೆ ಪ್ರಶಸ್ತಿ

**ಬೆಂಗಳೂರು:** ಎಸ್‌ಬಿಎಂ ಜೈನ್ ಕಾಲೇಜು ತಂಡ 6 ವಿಕೆಟ್‌ಗಳಿಂದ ಪ್ರೆಸಿಡೆನ್ಸಿ ತಂಡವನ್ನು ಮಣಿಸಿ ಜಂಗಲ್ ಲಾಡ್ಜಸ್ ಮತ್ತು ರೆಸಾರ್ಟ್ಸ್ ಟ್ರೋಫಿ ಕ್ರಿಕೆಟ್ ಪಂದ್ಯಾವಳಿಯ ಚಾಂಪಿಯನ್ ಆಗಿ ಹೊರಹೊಮ್ಮಿದೆ.

ನಗರದ ವೈಎಂಸಿಎ ಮೈದಾನದಲ್ಲಿ ನಡೆದ ಪ್ರಶಸ್ತಿ ಸುತ್ತಿನಲ್ಲಿ ಮೊದಲು ಬ್ಯಾಟ್ ಮಾಡಿದ ಪ್ರೆಸಿಡೆನ್ಸಿ ಕಾಲೇಜು ತಂಡ ಮಧ್ಯಮ ವೇಗಿ ವೈಶಾಕ್, ಲಾಲ್ ಸಚಿನ್ ಹಾಗೂ ಶಿವಾಲಿ ದಾಳಿಗೆ ತತ್ತರಿಸಿ 24.2 ಓವರ್‌ಗಳಲ್ಲಿ 125 ರನ್‌ಗಳಿಗೆ ಆಲೌಟಾಯಿತು.

ಸುಲಭ ಗುರಿ ಪಡೆದ ಜೈನ್ ಕಾಲೇಜು 22.1 ಓವರ್‌ಗಳಲ್ಲಿ 4 ವಿಕೆಟ್ ಕಳೆದುಕೊಂಡು ಜಯಭೇರಿ ಬಾರಿಸಿತು. ತಂಡದ ಲಾಲ್ ಸಚಿನ್ ಮತ್ತು ವೈಶಾಖ್ ತಲಾ 32 ರನ್ ಬಾರಿಸಿದರೆ, ಅರ್ಜುನ್ 36 ರನ್ ಗಳಿಸಿದರು.

ಟೂರ್ನಿಯಲ್ಲಿ ಶ್ರೇಷ್ಠ ಬ್ಯಾಟ್ಸ್‌ಮನ್ ಆಗಿ ಜೈನ್ ಕಾಲೇಜಿನ ಲಾಲ್ ಸಚಿನ್, ಶ್ರೇಷ್ಠ ಬೌಲರ್ ಆಗಿ ಪ್ರೆಸಿಡೆನ್ಸಿ ಕಾಲೇಜಿನ ತಿಮ್ಮಯ್ಯ,

ಶ್ರೇಷ್ಠ ಆಲ್‌ರೌಂಡರ್ ಆಗಿ ಪ್ರೆಸಿಡೆನ್ಸಿ ಕಾಲೇಜಿನ ರಕ್ಷಿತ್ ಮತ್ತು ಫೈನಲ್‌ನಲ್ಲಿ ಪಂದ್ಯಶ್ರೇಷ್ಠ ಜೈನ್ ಕಾಲೇಜಿನ ಲಾಲ್ ಸಚಿನ್ ಆಯ್ಕೆಯಾದರು.

■ **ಸಂಕ್ಷಿಪ್ತ ಸ್ಕೋರ್:** ಪ್ರೆಸಿಡೆನ್ಸಿ ಕಾಲೇಜು 24.2 ಓವರ್‌ಗಳಲ್ಲಿ 125 (ರಕ್ಷಿತ್ 49, ಪುನೀತ್ 20, ವೈಶಾಕ್ 3ಕ್ಕೆ22, ಶಿವಾಲಿ 2ಕ್ಕೆ 31, ಲಾಲ್‌ಸಚಿನ್ 2ಕ್ಕೆ8). ಜೈನ್ ಕಾಲೇಜು 22.1 ಓವರ್‌ಗಳಲ್ಲಿ 4 ವಿಕೆಟ್‌ಗೆ 129 (ಲಾಲ್ ಸಚಿನ್ 32, ವೈಶಾಕ್ 32, ಅರ್ಜುನ್ 36).